**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 6672 / 2021**

**ಚಾಸಾ ಃ- 08 / ಪ್ರಾಸಾ ಃ- 07**

| | |
|---|---|
| ಹೆಸರು | ನಾಗರಾಜು |
| ತಂದೆ ಹೆಸರು | ಹನುಮಯ್ಯ |
| ವಯಸ್ಸು | 61 |
| ಉದ್ಯೋಗ | ನಿವೃತ್ತ ಅಬಕಾರಿ ಉಪನಿರೀಕ್ಷಕರು |
| ವಿಳಾಸ | ಬೆಂಗಳೂರು |

**ದಿನಾಂಕಃ 27.02.2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 01.12.2020 ರಿಂದ 16.06.2021 ರವರೆಗೆ ಮಾಗಡಿ ಅಬಕಾರಿ ವಲಯದಲ್ಲಿ ಅಬಕಾರಿ ಉಪನಿರೀಕ್ಷಕರೆಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ಚಾಸಾ1 ರವರು ಮಾಗಡಿ ವಲಯ ವ್ಯಾಪ್ತಿಯಲ್ಲಿ ಇರುವ ಅಗಲಕೋಟೆ ಹ್ಯಾಂಡ್ ಪೋಸ್ಟ್, ಶಿವಾಜಿ ಹಿಂದೂ ಮಿಲಿಟರಿ ಹೋಟೆಲ್ ನಲ್ಲಿ ಜನಾರ್ದನ್ ರಾವ್ ಬಿನ್ ಬಾಬುರಾವ್ ರವರು ಅಕ್ರಮ ಮದ್ಯ ಶೇಖರಣೆ ಮಾಡಿ ಮಾರಾಟ ಮಾಡುತ್ತಿರುವುದರ ಬಗ್ಗೆ ದಿನಾಂಕ 26.12.2020 ರಂದು ಆರೋಪಿಯ ವಿರುದ್ದ ಮೊಕದ್ದಮೆಯನ್ನು ದಾಖಲಿಸಿರುವ ದಾಖಲಾತಿಗಳನ್ನು ದಿನಾಂಕ 28.12.2020 ರಂದು ಚಾಸಾ 1 ರವರು ನನಗೆ ಹಸ್ತಾಂತರಿಸಿರುತ್ತಾರೆ.

ದಿನಾಂಕ 04.01.2021 ರಂದು ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಳನ್ನು ಕಳುಹಿಸುತ್ತಿರುವ ಬಗ್ಗೆ ಪತ್ರವನ್ನು ರಚಿಸಿಕೊಂಡು ದಿನಾಂಕ 07.01.2021 ರಂದು ಎಫ್ ಎಸ್ ಎಲ್ ಗೆ ಚಾಸಾ-6ರವರ ಮುಖಾಂತರ ರಾಸಾಯನಿಕ ಪ್ರಯೋಗಾಲಯ, ಬೆಂಗಳೂರು ರವರಿಗೆ ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕ 04.01.2021 ರಂದು ಸಾತನೂರು ಗ್ರಾಮಪಂಚಾಯ್ತಿ ಅಭಿವೃದ್ಧಿ ಅಧಿಕಾರಿಯವರಿಗೆ ಕೃತ್ಯ ನಡೆದ ಸ್ಥಳವಾದ ಶಿವಾಜಿ ಮಿಲ್ಟ್ರಿ ಹೋಟೆಲ್ ನ ಮಾಲೀಕತ್ವದ ಬಗ್ಗೆ ವರಧಿ ನೀಡುವಂತೆ ಕೇಳಿಕೊಂಡಿರುತ್ತೇನೆ.

ದಿನಾಂಕ 22.01.2021 ರಂದು ಸದರಿ ಸಾತನೂರು ಗ್ರಾಮಪಂಚಾಯ್ತಿ ಅಭಿವೃದ್ಧಿ ಅಧಿಕಾರಿಯವರು ಪತ್ರದೊಂದಿಗೆ ಸದರಿ ಶಿವಾಜಿ ಮಿಲ್ಟ್ರಿ ಹೋಟೆಲ್ ನ ಮಾಲೀಕತ್ವವು ಬಿ.ಶಾಂತಪ್ಪ ಬಿನ್ ಡಿ.ಬಸಪ್ಪ ರವರ ಮಾಲೀಕತ್ವದಲ್ಲಿ ಕಟ್ಟಡ ಇರುತ್ತದೆ ಎಂದು ಧೃಡೀಕರಿಸಿ ಮಾಹಿತಿ ಕೊಟ್ಟಿರುತ್ತಾರೆ.

ದಿನಾಂಕ 16.02.2021 ರಂದು ಬಿ.ಶಾಂತಪ್ಪ ಬಿನ್ ಡಿ.ಬಸಪ್ಪ ರವರಿಗೆ ನೋಟೀಸ್ ನೀಡಿರುತ್ತೇವೆ. ಸದರಿ ನೋಟೀಸನ್ನು ಮಂಗಳಮ್ಮ ಕೋಂ ಬಿ.ಶಾಂತಪ್ಪ ರವರು ಸ್ವೀಕರಿಸಿಕೊಂಡಿರುತ್ತಾರೆ. ದಿನಾಂಕ 17.02.2021 ರಂದು ಸದರಿ ಮಂಗಳಮ್ಮ ರವರಿಂದ ಹೇಳಿಕೆ ಪಡೆದಿರುತ್ತೇವೆ. ಸದರಿ ಮಂಗಳಮ್ಮ ರವರು ನನ್ನ ಪತಿಯಾದ ಶಾಂತಪ್ಪ ರವರು ಮರಣ ಹೊಂದಿರುತ್ತಾರೆ ಎಂದು ತಿಳಿಸಿರುತ್ತಾರೆ. ಮರಣದ ನಂತರ ಸದರಿ ಕಟ್ಟಡವನ್ನು ನನ್ನ ಹೆಸರಿಗೆ ಬದಲಾವಣೆ ಮಾಡಿಕೊಂಡಿರುವುದಿಲ್ಲ ಹಾಗೂ ಸದರಿ ಕಟ್ಟಡವನ್ನು ಜನಾರ್ದನ ರಾವ್ ರವರಿಗೆ ಸದರಿ ಶಿವಾಜಿ ಮಿಲ್ಟ್ರಿ ಹೋಟೆಲ್ ನಡೆಸಿಕೊಂಡು ಹೋಗಲು ಸದರಿ ಶಾಂತಪ್ಪ ರವರು ಕೊಟ್ಟಿರುತ್ತಾರೆ ಹಾಗೂ ಹೋಟೆಲ್ ನಡೆಸಲು ಮಾತ್ರ ಅವಕಾಶ ಕೊಟ್ಟಿದ್ದು ಬೇರೆ ಅಕ್ರಮಗಳನ್ನು ನಡೆಸಲು ಅವಕಾಶ ಕೊಟ್ಟಿರುವುದಿಲ್ಲ ಎಂದು ಹೇಳಿಕೆ ಕೊಟ್ಟಿರುತ್ತಾರೆ. ಸದರಿ ಹೇಳಿಕೆಯೊಂದಿಗೆ ಶಾಂತಪ್ಪ ರವರ ಮರಣ ಪ್ರಮಾಣಪತ್ರವನ್ನು ನೀಡಿರುತ್ತಾರೆ. ಹೊಟೆಲ್ ನಡೆಸುವ ಬಗ್ಗೆ ಲೈಸೆನ್ಸ್ ಅನ್ನು ನೀಡಿರುತ್ತಾರೆ.

ದಿನಾಂಕ 11.02.2021 ರಂದು ಎಫ್ ಎಸ್ ಎಲ್ ರವರಿಂದ ರಾಸಾಯನಿಕ ವರಧಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ತನಿಖೆ ಮುಕ್ತಾಯಗೊಂಡಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ಆರೋಪಿ ವಿರುದ್ದ ಅಂತಿಮ ವರಧಿಯನ್ನು ಸಲ್ಲಿಸಿರುತ್ತೇನೆ.

ಈಗ ಸಾಕ್ಷಿಗೆ ನಿಪಿ-08ನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಎಫ್ ಎಸ್ ಎಲ್ ವರಧಿಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ

ಸದರಿ ವರಧಿಯನ್ನು ನಿಪಿ-9 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-9(ಎ)ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಸಾತನೂರು ಗ್ರಾಮಪಂಚಾಯ್ತಿ ಅಭಿವೃದ್ಧಿ ಅಧಿಕಾರಿಯವರಿಗೆ ನೀಡಿದ ನಿವೇದನೆಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ನಿವೇದನೆಯನ್ನು ನಿಪಿ-10 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-10(ಎ)ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಸಾತನೂರು ಗ್ರಾಮಪಂಚಾಯ್ತಿ ಅಭಿವೃದ್ಧಿ ಅಧಿಕಾರಿಯವರು ನೀಡಿದ ವರಧಿಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ವರಧಿಯನ್ನು ನಿಪಿ-11 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-11(ಎ)ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಡಿಮ್ಯಾಂಡ್ ರಿಜಿಸ್ಟರ್ ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಡಿಮ್ಯಾಂಡ್ ರಿಜಿಸ್ಟರ್ ಅನ್ನು ನಿಪಿ-12 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-12(ಎ)ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ದಿನಾಂಕ 16.02.2021 ರಂದು ಬಿ.ಶಾಂತಪ್ಪ ಬಿನ್ ಬಸಪ್ಪ ರವರಿಗೆ ನೀಡಿದ ನೋಟೀಸನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ನೋಟೀಸನ್ನು ನಿಪಿ-13 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-13(ಎ)ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಬಿ.ಶಾಂತಪ್ಪ ರವರ ಧೃಡೀಕೃತ ನಕಲಿನ ಮರಣ ಪ್ರಮಾಣಪತ್ರವನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಮರಣ ಪ್ರಮಾಣಪತ್ರವನ್ನು ನಿಪಿ-14 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-14(ಎ)ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ರಿಜಿಸ್ಟ್ರೇಷನ್ ಪ್ರಮಾಣಪತ್ರವನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಪ್ರಮಾಣಪತ್ರವನ್ನು ನಿಪಿ-15 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-15(ಎ)ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಎಫ್ ಎಸ್ ಎಲ್ ಗೆ ಕಳುಹಿಸಿದ ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಮುದ್ದೆಮಾಲು 1 ರಿಂದ 3 ಅನ್ನು ತೋರಿಸಲಾಗಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು** ಃ- **ಶ್ರೀ.ಆರ್.ಎಸ್** ವಕೀಲರಿಂದ **ಆರೋಪಿ** ಪರವಾಗಿ ಃ-

ಮಹಜರ್ ನಲ್ಲಿ ಪ್ಲಾಸ್ಟಿಕ್ ಚೀಲ ಎಂದು ಬರೆದಿದ್ದು ಸದರಿ ಚೀಲವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಬಗ್ಗೆ ನೋಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚಾಸಾ 1, 5 ಮತ್ತು 6 ರವರು ದಿನಾಂಕ 26.12.2020 ರಂದು ಕರ್ತವ್ಯಕ್ಕೆ ಹಾಜರಾಗಿದ್ದರು ಎಂಬುದಕ್ಕೆ ಕರ್ತವ್ಯ ಧೃಡೀಕರಣ ಪತ್ರವನ್ನು ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ನಮೂದಿಸಿರುವ ಚೆಕ್ಕುಬಂಧಿಯ ವ್ಯಕ್ತಿಗಳ ಹೇಳಿಕೆಯನ್ನು ಪಡೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಯಾವುದೇ ವಸ್ತುವನ್ನು ಎಫ್ ಎಸ್ ಎಲ್ ಗೆ ಕಳುಹಿಸಿರುವುದಿಲ್ಲ ಒಂದು ಸುಳ್ಳು ವರಧಿಯನ್ನು ಪಡೆದಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಯವರ ಹೇಳಿಕೆ ಪಡೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಂಗಳಮ್ಮ ರವರನ್ನು ಸಾಕ್ಷಿಯನ್ನಾಗಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮಂಗಳಮ್ಮ ರವರಿಗೆ ಯಾವುದೇ ನೋಟಿಸ್ ಜಾರಿಯಾಗಿರುವುದಿಲ್ಲ ಹಾಗೂ ಅವರು ನಿಮಗೆ ಯವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಈ ಪ್ರಕರಣಕ್ಕೋಸ್ಕರ ಮರಣ ಪ್ರಮಾಣಪತ್ರವನ್ನು ಸೃಷ್ಟಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಶಾಂತಪ್ಪ ರವರು ಆರೋಪಿಗೆ ಬಾಡಿಗೆ ಕೊಟ್ಟ ಬಗ್ಗೆ ಬಾಡಿಗೆ ಕರಾರುಪತ್ರವನ್ನು ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮುದ್ದೆಮಾಲು 1 ರಿಂದ 3 ನ್ನು ಎಲ್ಲಿಂದ ಖರೀದಿ ಮಾಡಿ ತಂದಿದ್ದರು ಎಂದು ವಿಚಾರಣೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಹೋಟೆಲ್ ನಲ್ಲಿ ನಾವು ಮದ್ಯಪಾನ ಮಾಡುತ್ತೇವೆ ಎಂದು ಯಾವುದೇ ಗ್ರಾಹಕರ ಹೇಳಿಕೆ ಪಡೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಹಾಜರು ಪಡಿಸಿರುವ ಎಲ್ಲಾ ದಾಖಲೆಗಳು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿರುವ ದಾಖಲೆಗಳು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಗ್ರಾಮಪಂಚಾಯ್ತಿ ಚುನಾವಣೆ ಇತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ಸಂಬಂಧ ನಿಮ್ಮ ಇಲಾಖೆಯ

ಅಂಕಿಅಂಶಕ್ಕೋಸ್ಕರ ಸುಳ್ಳು ದೂರನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆರೋಪಿ ವಿರುದ್ದ ಯಾವುದೇ ಆರೋಪ ಸಾಭೀತಾಗದೇ ಇದ್ದರೂ ಸಹ ಆರೋಪಿ ವಿರುದ್ದ ಸುಳ್ಳು ಅಂತಿಮ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**